

ಜರ್ಮನಿಯ ಯೂಲಿಶ್‌ನ ತೆರೆದ ಪುಸ್ತಕ ಕಪಾಟು

ಪುಸ್ತಕಗಳನ್ನು ನಾನೇ ಆಸಕ್ತರಿಗೆ ಹಂಚಿಬಿಡುತ್ತೇನೆ, ನನ್ನಲ್ಲಿರುವ ಸಂಗ್ರಹ ಕಡಿಮೆ ಮಾಡಿಕೊಳ್ಳುತ್ತಿದ್ದೇನೆ.

ಪುಸ್ತಕ ದಾಸೋಹದ ಮತ್ತೊಂದು ರೂಪ ಮೊಟ್ಟಮೊದಲಿಗೆ ಕಂಡಿದ್ದು ಅಮೆರಿಕದ ಬಾಸ್ಟನ್‌ನಲ್ಲಿ. ಅಲ್ಲಿನ ಮೆಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ನನ್ನ ಮಗಳು ಪೋಸ್ಟ್ ಡಾಕ್ ವ್ಯಾಸಂಗ ಮಾಡುತ್ತಿದ್ದ ಸಮಯದಲ್ಲಿ ಭೇಟಿ ನೀಡಿದ್ದಾಗ, ರಸ್ತೆಯ ಬದಿಯಲ್ಲಿದ್ದ ಗಾಜಿನ ಬಾಗಿಲಿನ ಕಪಾಟುಗಳಂತೆ ಆವರಣಗಳನ್ನು ಹೊಂದಿದ್ದ ರಚನೆಗಳನ್ನು ಕಂಡೆ. ಅವೇನೆಂದು ಕುತೂಹಲದಿಂದ ವಿಚಾರಿಸಿದಾಗ, ಅವು ಪುಸ್ತಕ ವಿನಿಮಯ ಅಥವಾ ವಿಲೇವಾರಿ ಕಿಯೋಸ್ಕ್‌ಗಳೆಂದಳು ಮಗಳು. ಯಾರಾದರೂ ತಮ್ಮಲ್ಲಿನ ಪುಸ್ತಕಗಳನ್ನು ಓದಿದ ನಂತರ ಅವು ತಮಗೆ ಬೇಡವೆನ್ನಿಸಿದಲ್ಲಿ ಅವುಗಳನ್ನು ತಂದು ಅಲ್ಲಿಡುತ್ತಾರೆ. ಯಾರಾದರೂ ಆಸಕ್ತರು ಅಂಥ ಕಿಯೋಸ್ಕ್‌ಗಳಲ್ಲಿ ಕಂಡಾಗ, ತಮ್ಮ ಆಸಕ್ತಿಯ ಪುಸ್ತಕ ಅಲ್ಲಿದ್ದಲ್ಲಿ ಅವುಗಳನ್ನು ಕೊಂಡೊಯ್ಯಬಹುದು, ಅವರೂ ಅವರಲ್ಲಿನ ಬೇಡವಾದ, ಓದಿದ ಪುಸ್ತಕಗಳನ್ನು ತಂದು ಅಲ್ಲಿಡಬಹುದು. ನಾನು ನೋಡಿದಾಗ ಅಂಥ ಒಂದು ಕಿಯೋಸ್ಕ್‌ನಲ್ಲಿ ಹಲವಾರು ಪುಸ್ತಕ, ಪತ್ರಿಕೆಗಳಿದ್ದವು.

ಮತ್ತೊಮ್ಮೆ ಜರ್ಮನಿಯ ಯೂಲಿಶ್ ನಗರಕ್ಕೆ ಭೇಟಿ ನೀಡಿದ್ದಾಗ ಅಲ್ಲಿ ಒಂದು ದೊಡ್ಡ ಮರದ ಕೆಳಗೆ ಹಳೆಯ ಟೆಲಿಫೋನ್ ಬೂತಿಗೆ ಬಹು ಬಣ್ಣಗಳನ್ನು ಬಳಿದಿದ್ದರು. ಕುತೂಹಲದಿಂದ ಹತ್ತಿರ ಹೋಗಿ ನೋಡಿದಾಗ ಒಳಗೆ ರ್‍ಯಾಕ್ ಒಂದರಲ್ಲಿ ಪುಸ್ತಕಗಳನ್ನು ಜೋಡಿಸಿರುವುದು ಕಾಣಿಸಿತು. ಬಾಗಿಲು ತೆಗೆದು ನೋಡಿದೆ. ಬಹಳಷ್ಟು ಪುಸ್ತಕಗಳಿದ್ದವು. ಅದರ ಗಾಜಿನ ಬಾಗಿಲ ಮೇಲೆ ಜರ್ಮನ್ ಭಾಷೆಯಲ್ಲಿ ಏನೋ ಬರೆದಿತ್ತು. ಅಷ್ಟರಲ್ಲಿ ಅಲ್ಲಿಗೆ ಒಬ್ಬ ಮಹಿಳೆ ಸೈಕಲ್‌ನಲ್ಲಿ ಬಂದು ಪುಸ್ತಕಗಳನ್ನು ತೆಗೆದುಕೊಂಡು ನೋಡಲಾರಂಭಿಸಿದಳು. ಆಕೆಗೆ ಇಂಗ್ಲಿಷ್ ಬರುತ್ತದೆಯೇ ಎಂದು ಕೇಳಿ, 'ಈ ಪುಸ್ತಕಗಳು ಇಲ್ಲಿ ಏಕಿವೆ?' ಎಂದು ಕೇಳಿದೆ. ಆಕೆ ನಗುತ್ತ, 'ಇದು ಸಾರ್ವಜನಿಕ ಉಚಿತ ಗ್ರಂಥಾಲಯ. ನಿಮಗೆ ಬೇಕಾದ ಪುಸ್ತಕ ಓದಲು ಕೊಂಡೊಯ್ಯಬಹುದು, ಸಾಧ್ಯವಾದರೆ ವಾಪಸ್ಸು ತಂದಿಡಬೇಕು. ನಿಮ್ಮಲ್ಲಿಯೂ ಪುಸ್ತಕಗಳಿದ್ದಲ್ಲಿ ಇಲ್ಲಿ ಇತರರು ಕೊಂಡೊಯ್ದು ಓದಲೆಂದು ಇಡಬಹುದು' ಎಂದಳು.

ಆ ಜರ್ಮನ್ ಭಾಷೆಯಲ್ಲಿದ್ದ ಸೂಚನೆಯನ್ನು ಫೋಟೊ ತೆಗೆದುಕೊಂಡು ಬಂದು ಗೂಗಲ್ ಬಳಸಿ ಅನುವಾದ ಮಾಡಿದೆ. ಅದರಲ್ಲಿ ಈ ಮುಂದಿನಂತೆ ಬರೆದಿತ್ತು (ಕನ್ನಡ ಅನುವಾದ ನನ್ನದು):

**ತೆರೆದ ಪುಸ್ತಕ ಕಪಾಟು**

- ನಿಮಗೆ ಬೇಕಾದ ಪುಸ್ತಕ ಆಯ್ಕೆ ಮಾಡಿಕೊಳ್ಳಬಹುದು.
- ನೀವದನ್ನು ತೆಗೆದುಕೊಂಡು ಹೋಗಿ ಓದಿದ ನಂತರ ಈ ಕಪಾಟಿನಲ್ಲಿಯೇ ವಾಪಸ್ ತಂದಿಡಿ.
- ನಿಮಗೆ ಆ ಪುಸ್ತಕ ಬೇಕಾಗಿದ್ದಲ್ಲಿ ಅದನ್ನು ನೀವೇ ಇಟ್ಟುಕೊಳ್ಳಬಹುದು ಮತ್ತು ಮತ್ತೊಂದು ಪುಸ್ತಕವನ್ನು ಇಲ್ಲಿ ತಂದಿಡಬಹುದು.
- ನಿಮಗೆ ಆ ಪುಸ್ತಕ ಬೇಕೇ ಬೇಕೆನ್ನಿಸಿದಲ್ಲಿ ಖಂಡಿತಾ ಅದನ್ನು ನೀವೇ ಇಟ್ಟುಕೊಳ್ಳಬಹುದು. ಆದರೆ, ಆ ಪುಸ್ತಕ ನಿಜವಾಗಿಯೂ ಅಷ್ಟು ಒಳ್ಳೆಯದಾದಲ್ಲಿ, ಅದನ್ನು ಇತರರೂ ಓದಬೇಕಲ್ಲವೆ?



ಸ್ಯಾಂಟ ಬಾರ್ಬರ ನಗರದಲ್ಲಿನ ಮನೆಯ ಮುಂದೆ ಇರಿಸಿರುವ ಕಪಾಟು
'If you like it, take it'